Since, the launching of a drive has been initiated to tackle the pest during the main season itself, the question of purchasing pesticides in advance out of the grants sanctioned for the year 1972-73 does not arise.

The proposal of the State Government for getting the mealy bug pest incidence declared as an endemic one has not yet been approved by the Government of India.

As regards waiving recovery of the cost of operation charges from the beneficiaries, it may be stated that several other programmes like those for control of the Deccan Wingless grasshappers, the Red-headed hairy caterpillers, have been taken up in the past under the provision of the Mysore Agricultural Pests and Diseases Act, 1968, and recoveries of the cost of operation are in progress. As such, if either subsidy or free distribution of pesticides is allowed in this particular programme in South Kanara District, Government may have to allow similar concessions in respect of other areas and outbreaks of other pests. Hence it would not be possible for Government to waive recovery of the cost of operation in the anti-mealy bug programme in South Kanara District. If the Central Government O. Ks. it the State Government will be glad to give this concession to the Agriculturists.

ಶ್ರೀ ಬಿ. ವಿ. ಕಕ್ಕಿಲಾಯ :—ನೋಟಿಫಿಕೇಷನ್ ಈಗಾಗಲೇ ಹೊರಡಿಸಿದ್ದೇವೆಂದು ಹೇಳಿ, ಕೇಂದ್ರ ಸರ್ಕಾರದವರೂ ಇನ್ನೂ ಕೂಡ ತಮ್ಮ ಬೇಡಿಕೆಗೆ ಮನ್ನಣೆ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಯೋಚನೆ ಮಾಡುತ್ತಿರಬಹುದು ಎಂದು ನನ್ನ ಅಭಿಪ್ರಾಯ. ಇದು ಆಗುವ ತನಕ ದಯವಿಟ್ಟು ಲ್ಯಾಂಡ್ ರೆವೆನ್ಯೂ ಆಕ್ಟ್ ಪ್ರಕಾರ ರಿಕವರಿ ಮಾಡದೆ ತಡೆಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri K. H. PATIL.—It will be considered.

(iv) Re. : Koyna water to be scarcity Areas of the state particularly to Bijapur District.

ಶ್ರೀ ಎಸ್. ವೈ. ಪಾಟೀಲ್ (ಸಿಂಧಿ,) :—ಮಾನ್ಯ ಸಭಾಧ್ಯಕ್ಷಿಣಿಯವರೇ, ತಮ್ಮ ಮೂಲಕ ಸರ್ಕಾರಕ್ಕೆ ನನ್ನ ನಮ್ಮ ಪ್ರಾರ್ಥನೆ ಏನೆಂದರೆ ಕೊಯ್ನಾ ನದಿಯ ನೀರು ಬಿಜಾಪುರ ಜಿಲ್ಲೆಗೆ 26ನೇ ತಾರೀಖು ಬರುತ್ತದೆ ಎಂದು ಪ್ರಸಿದ್ಧವಾಗಿತ್ತು. 23ನೇ ತಾರೀಖು ಮಹಿಷ ಎಂಬಲ್ಲಿಗೆ ಬಂದರೂ, ಅಲ್ಲಿಂದ ಮುಂದೆ ಎಂಟುಹತ್ತು ಮೈಲಿ ಪುನಃ ಮಹಾರಾಷ್ಟ್ರ ಪ್ರದೇಶ ಬರುವುದರಿಂದ ಅವರೇ ಆ ನೀರನ್ನು ಉಪಯೋಗಿಸುವ ಸಂಭವವಿದೆ. ಬಿಜಾಪುರದಿಂದ ಒಬ್ಬ ಮನುಷ್ಯ ಬಂದಿದ್ದ. ಇನ್ನು ಎಂಟು ದಿವಸಕ್ಕೆ ಕುಡಿಯುವ ನೀರಿಲ್ಲ, ಬಂದ್ ಆಗುತ್ತದೆ ಎಂದು ಹೇಳಿದ. ಇದರಿಂದ ಆ ಭಾಗದ ಜನ ಬಹಳ ಗಾಬರಿಯಾಗಿದ್ದಾರೆ, ಬಿಜಾಪುರಕ್ಕೆ ಇನ್ನು ಎಂಟು ದಿವಸಗಳ ನಂತರ ನೀರು ಇಲ್ಲವೆಂದರೆ ಅಲ್ಲಿಯ ಜನಸಂಖ್ಯೆ ಎಷ್ಟಿದೆ, ಅವರಿಗೆ ನೀರನ್ನು ಒದಗಿಸಲು ಏನು

ವ್ಯವಸ್ಥೆಮಾಡುತ್ತಾರೆ ? ಇದರ ಕಡೆ ಕೂಡ ಲಕ್ಷ್ಯ ಕೊಡಬೇಕು. ಬಿಜಾಪುರ ಭಾಗದಲ್ಲಿ 26ನೇ ತಾರೀಖು ನೀರು ಬರುತ್ತದೆ ಎಂದು ಜನರು ತಿಳಿದುಕೊಂಡಿದ್ದು 28ನೇ ತಾರೀಖು ಆದರೂ ಇಲ್ಲಿಯವರೆಗೂ ಬಂದಿಲ್ಲವಾಗಿ ಜನರು ನಿರಾಶರಾಗಿದ್ದಾರೆ ; ಗಾಬರಿಯಾಗಿದ್ದಾರೆ. ಇದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯ ವ್ಯಕ್ತ ಮಾಡಬೇಕು, ನೀರಿನ ತೊಂದರೆಯಾಗಲಾರದೆ ಸರ್ಕಾರ ಕಾಳಜಿ ತೆಗೆದುಕೊಳ್ಳಬೇಕು.

ಶ್ರೀ ಕೆ. ಎಚ್. ಪಾಟೀಲ್ :—ಮಾನ್ಯ ಸದಸ್ಯರಾದ ಪಾಟೀಲ್ ಅವರು ಬಿಜಾಪುರ ಜಿಲ್ಲೆಯಲ್ಲಿರುವ ನೀರಿನ ತೊಂದರೆ ಬಗ್ಗೆ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಕೊಯ್ನಾ ನೀರಿನ ಬಗ್ಗೆ ಈಗಾಗಲೇ ಸದನದ ಎದುರಿಗೆ ಎರಡು ಮೂರು ಸಲ ಪ್ರಸ್ತಾಪವಾಗಿದೆ. ಇದಕ್ಕೆ ಸಂಬಂಧಪಟ್ಟ ಸಚಿವರು ಎಲ್ಲ ಸದಸ್ಯರಿಗೆ ಸಮಾಧಾನವಾಗುವ ರೀತಿಯಲ್ಲಿ ಹೇಳಿದ್ದಾರೆ. ಮಾನವೀಯತೆಯ ದೃಷ್ಟಿಯಿಂದ ಕುಡಿಯಲು ನೀರು ಬೇಕು ಎನ್ನುವ ಕಾರಣದಿಂದ ಮೈಸೂರು ಸರ್ಕಾರ ಮಹಾರಾಷ್ಟ್ರ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿದ್ದು ಮಹಾರಾಷ್ಟ್ರ ಸರ್ಕಾರ ನೀರನ್ನು ಬಿಟ್ಟಿದೆ ಎಂದು ಅಧಿಕೃತವಾಗಿ ವರ್ತಮಾನ ಬಂದಿದೆ. 26ನೇ ತಾರೀಖಿನ ಒಳಗಾಗಿ ನೀರು ಬರುತ್ತದೆ ಎನ್ನುವ ನಿರೀಕ್ಷೆ ನಮಗೆ ಇತ್ತು. ಬಹುಶಃ ಸ್ವಲ್ಪ ಭೂಮಿ ಕಾಯ್ದಿರುವುದರಿಂದ ತಡವಾಗಿರಬಹುದು. ಏಕೆ ತಡವಾಗಿದೆ, ಎಲ್ಲಿ ತಡವಾಗಿದೆ ಎನ್ನುವುದರ ಬಗ್ಗೆ ಸಾಯಂಕಾಲ ದೊಳಗೆ ಪರಿಶೀಲನೆ ಮಾಡಿ ಏನೇನು ತ್ವರಿತವಾದ ಕ್ರಮಗಳನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆಯೋ ಆ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆನ್ನುವ ಮಾತನ್ನು ಹೇಳುತ್ತೇನೆ.

ಒಂದು ವೇಳೆ ನೀರು ಬರುವುದು ತಡವಾದರೆ ಭಯಾನಕವಾದ ನೀರಿನ ಅಭಾವ ಉಂಟಾಗುತ್ತದೆ ಎಂದು ಹೇಳಿದ್ದಾರೆ. ನೀರಿನ ಅಭಾವ ಬಿಜಾಪುರದಲ್ಲಿ ಆಗುತ್ತದೆ ಎನ್ನುವ ಅರಿವು ಸರ್ಕಾರಕ್ಕೆ ಇದೆ. ಈಗಾಗಲೇ ಅಲ್ಲಿ ಟ್ರಕ್‌ಗಳ ಮೂಲಕ ನೀರನ್ನು ಅನೇಕ ಕಡೆಗಳಲ್ಲಿ ಒದಗಿಸ ಲಾಗುತ್ತಿದೆ. ಟ್ರಕ್‌ಗಳು ಸಾಲದೆ ಬಂದರೆ ಚಕ್ಕಡಿಗಳಲ್ಲಿ ನೀರನ್ನು ಎಲ್ಲಿಗೆ ಬೇಕೋ ಅಲ್ಲಿಗೆ ತಂದುಕೊಡಬೇಕೆಂದು ಹೇಳಿದ್ದೇವೆ.

ಆದುದರಿಂದ ಇದು ಬಹಳ ಪ್ರಮುಖವಾದ ಸರಕಾರದ ಕರ್ತವ್ಯ ಎಂದು ಹೆಚ್ಚು ಜನತೆಗೆ ಸಮಾಧಾನವಾಗುವಂತೆ ನಾವು ಮಾಡಬೇಕಾಗಿದೆ, ಇದಕ್ಕಾಗಿ ನಾವು ದೇವರನ್ನು ಪ್ರಾರ್ಥನೆ ಮಾಡಿ ಮಳೆ ಬರಲಿ ಎಂದು ಆಶಿಸಿ ಪರಮಾತ್ಮನು ಇಂತಹ ಕಷ್ಟ ಕಾಲದಲ್ಲಿ ಕೈ ಬಿಡುವುದಿಲ್ಲ ಎನ್ನುವ ನಂಬಿಕೆಯ ಮೇಲೆ ನಾವು ಇದನ್ನು ಮಾನವೀಯತೆ ದೃಷ್ಟಿಯಿಂದ ನೋಡಬೇಕಾಗಿದೆ. ಆದರೆ ಮಾನ್ಯ ಸದಸ್ಯರು ಹೇಳಿದಂತೆ ಈ ಭಾಗದ ಜನತೆಗೆ ನೀರು ಸಿಗುತ್ತಿಲ್ಲ ಎಂದು ಹೇಳಿದರು. ನೀವೇ ನಮ್ಮ ಸ್ಥಾನದಲ್ಲಿದ್ದರೆ ಎಷ್ಟು ಕಾರ್ಯ ಮಾಡುತ್ತಿದ್ದರೋ ಅದಕ್ಕಿಂತ ಹೆಚ್ಚಿನ ಕಾರ್ಯ ಮಾಡಲು ಸರಕಾರ ಪ್ರಯತ್ನ ಮಾಡುತ್ತಿದೆ ಮತ್ತು ತ್ವರಿತವಾಗಿ ಸರಕಾರ ಇದರ ಬಗ್ಗೆ ಏನೇನು ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದರ ಬಗ್ಗೆ ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ಮಾಡಿಸುತ್ತೇನೆ ಎಂದು ಇಷ್ಟು ಭರವಸೆ ಕೊಡುತ್ತೇನೆ.

ಶ್ರೀ ಎಸ್. ವೈ. ಪಾಟೀಲ್ :—ಹೋದ ಸಾರಿ ಜಮಖಂಡಿ ತಾಲ್ಲೂಕಿನ ಜನಕ್ಕೆ ನೀರು ಸಿಗಲಿಲ್ಲ ಎಂದು ಸರಕಾರದ ಗಮನಕ್ಕೆ ತಂದು ಹೇಳಿದರೂ ಅಲ್ಲಿನ ಜನಕ್ಕೆ ಆಗ ನೀರು ಸಿಗಲಿಲ್ಲ. ಇದರಿಂದ ಜನಕ್ಕೆ ಆಗ ನಿರಾಶೆಯಾಯಿತು. ಈಗ ಮಹಾರಾಷ್ಟ್ರದ ಜನರೇ ಇಲ್ಲಿರುವ 8–10 ಹಳ್ಳಿಗಳಲ್ಲಿ ಇದರ ನೀರನ್ನು ಉಪಯೋಗಿಸುತ್ತಿದ್ದಾರೆಂದು ಪ್ರತಿಕೆಗಳಲ್ಲಿ ಇಂದು ಸುದ್ದಿ ಬಂದಿದೆ. ಹೀಗಿರುವಾಗ ಸರಕಾರದ ಮಂತ್ರಿಗಳು ದೇವರಲ್ಲಿ ಭರವಸೆ ಇಡೋಣ ಎಂದು ಹೇಳಿದರೆ ಇದು ಸರಕಾರದ ಜವಾಬುದಾರಿ ಹೊತ್ತಿರುವವರಿಂದ ಬರುವ ಮಾತುಗಳಲ್ಲ. ನೀವು ಎಲ್ಲಿಂದಲಾದರೂ ತನ್ನಿ ರೈಲ್ವೆ ವ್ಯಾಗನ್‌ನಲ್ಲಾದರೂ ತನ್ನಿ ಚಕ್ಕಡಿಗಳಲ್ಲಿ ಆದರೂ ತನ್ನಿ ಒಟ್ಟಿನಲ್ಲಿ ನಮ್ಮ ಜನಕ್ಕೆ

ಕುಡಿಯುವ ನೀರಿನ ವ್ಯವಸ್ಥೆ ಮಾಡಲೇಬೇಕು. ಸುಮ್ಮನೆ ಇದರ ಬಗ್ಗೆ ದೇವರ ಉಡಿಯಲ್ಲಿ ಹಾಕಬೇಕೆಂದು ಹೇಳುವುದು ಸರಿಯಲ್ಲ. ಈ ರೀತಿ ಸರಕಾರದ ರೆಸ್‌ಪಾನ್ಸಿಬಿಲಿಟಿ ಡಿಸ್‌ಡೇನ್ ಮಾಡಬಾರದು. ನಮ್ಮ ಸ್ಥಾನದಲ್ಲಿದ್ದರೆ ನೀವೇನು ಮಾಡುತ್ತಿದ್ದಿರಿ ಎಂದರು. ನೀವು ಕ್ಯಾಬಿನೆಟ್ಟಿನಲ್ಲಿರುವುದರಿಂದ ಮುಖ್ಯ ಮಂತ್ರಿಗಳ ಕಡೆಗೆ ಹೇಳಿ ಯಾವುದಾದರೂ ರೀತಿಯಲ್ಲಿ ಇಲ್ಲಿಗೆ ನೀರು ಕೊಡಿಸುವ ವ್ಯವಸ್ಥೆ ಮಾಡಬೇಕು. ನೀರನ್ನು ಎಲ್ಲಿಂದಲಾದರೂ ತನ್ನಿ. ಭಾರತ ದೇಶದಲ್ಲೋ ಇಲ್ಲವೇ ಬೇರೆ ಭಾಗಗಳಿಂದಲೋ ಎಲ್ಲಿಯಾದರೂ ಸರಿ ಸರಕಾರ ಬೇಗನೆ ನೀರನ್ನು ತರಿಸಿ ಬಿಜಾಪುರದ ಜನತೆಗೆ ಸಹಾಯ ಮಾಡಬೇಕು. ಇದರ ಕಡೆಗೆ ತೀವ್ರವಾದ ಗಮನಹರಿಸಬೇಕೆಂದು ನಾವು ಒತ್ತಿ ಹೇಳುತ್ತಿರುವುದು. ಇದರ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ಕೊಡುವುದರ ಬಗ್ಗೆ ಪರಿಶೀಲನೆ ಮಾಡಬಹುದು.

ಶ್ರೀ ಕೆ. ಹೆಚ್. ಪಾಟೀಲ್ :—23-4-1973 ರಿಂದಲೇ ನೀರು ಕೊಡಬೇಕೆಂದು ವ್ಯವಸ್ಥೆ ಮಾಡಿ ನೀರು ಬಿಟ್ಟಿದ್ದಾರೆ. ನೀರು ಬರುವುದರಲ್ಲಿ ಒಂದೆರಡು ದಿನಗಳು ತಡವಾಗಿರಬಹುದು. ನೀರು ಬರಲಿಲ್ಲ ಎಂದು ಇಲ್ಲಿ ಸೆಕ್ಷನ್ 144 ಹಾಕಲಿಕ್ಕೆ ಬರುವುದಿಲ್ಲ. ನಾನಾಗಲೇ ಹೇಳಿದೆ, ಈ ಸಮಸ್ಯೆಯನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗಿದೆ, ಸರಕಾರವೂ ಶಕ್ತಿ ಮೀರಿ ಪ್ರಯತ್ನ ಮಾಡುತ್ತಿದೆ. ಇದಕ್ಕೆ ಮಾನ್ಯ ಸದಸ್ಯರ ಸಹಕಾರ ಸಂಪೂರ್ಣವಾಗಿ ನಮಗೆ ಬೇಕು. ನೀರನ್ನು ಮಹಾರಾಷ್ಟ್ರದ ಹಳ್ಳಿಗಳವರೇ ಉಪಯೋಗಿಸುತ್ತಾರೆ ಇಲ್ಲವೇ ಬೇರೆ ಕಡೆಯಿಂದ ಅವರು ತಂದು ಉಪಯೋಗಿಸುತ್ತಾರೆ ಎಂದು ಇಲ್ಲಿ ಈ ರೀತಿಯಾಗಿ ಹೇಳಿದರೆ ಹಾಗೂ ಮಹಾರಾಷ್ಟ್ರದ ಬಗ್ಗೆ ಬೊಬ್ಬಾಟ ಮಾಡಿದರೆ ಸರಿಯಾಗುವುದಿಲ್ಲ. ಇದರ ಬದಲು ಸುಮ್ಮನೆ ಇದ್ದರೆ ಒಳಿತು. ಮಾನ್ಯ ಸದಸ್ಯರು ಹೇಳುವಂತೆ ನಾವು ಹೋಗಿ ಮಹಾರಾಷ್ಟ್ರದ ಹಳ್ಳಿಗಳಿಗೆ ಸೆಕ್ಷನ್ 144 ಹಾಕಿ ನೀರು ಕೊಡಬಾರದು ಎಂದು ಹೇಳಲಾಗುವುದಿಲ್ಲ. ಆದಷ್ಟು ಸರಕಾರ ಸಾಕಷ್ಟು ಮುಂಜಾಗರೂಕತೆ ವಹಿಸಿ ಬಿಜಾಪುರ ಜಿಲ್ಲೆಗೆ ಕೊಯ್ನಾ ನೀರನ್ನು ಬಹಳ ಬೇಗನೆ ಒದಗಿಸಲು ತ್ವರಿತವಾಗಿ ಪ್ರಯತ್ನ ಮಾಡುತ್ತೇವೆ ಮತ್ತು ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಇಷ್ಟರಿಂದ ಮಾನ್ಯ ಸದಸ್ಯರು ಸಮಾಧಾನ ಪಟ್ಟುಕೊಳ್ಳಬೇಕು ಇದರಲ್ಲಿ ದೇವರ ಬಗ್ಗೆ ಏಕೆ ಹೇಳಿದರು ಎಂದು. ಯಾವಾಗಲೂ ಸತ್ಯದಿಂದ ಕೆಲಸ ಮಾಡುವಾಗ ಅದರ ಭಾರವನ್ನು ದೇವರ ಮೇಲೆ ಹಾಕಿದರೆ ಇದರಿಂದ ಏನೂ ತಪ್ಪಾಗುವುದಿಲ್ಲ. ನಮಗೆ ಇನ್ನೂ ಸಹಾಯವಾಗುತ್ತದೆ. ಈ ದೃಷ್ಟಿಯಿಂದ ಹೇಳಿದೆ. ಸರಕಾರ ಮಾಡುವ ಕೆಲಸಗಳನ್ನು ತೀವ್ರವಾಗಿ ಮಾಡುತ್ತದೆ ಮತ್ತು ಮಾನ್ಯ ಸದಸ್ಯರ ಕಾಳಜಿಯೂ ಸರಕಾರಕ್ಕೆ ಅರ್ಥವಾಗಿದೆ. ತ್ವರಿತವಾದ ರೀತಿಯಲ್ಲಿ ಇಲ್ಲಿನ ಜನಕ್ಕೆ ನೀರಿನ ಲಾಭ ಸಿಗುವಂತೆ ತಕ್ಕ ವ್ಯವಸ್ಥೆ ಮಾಡುತ್ತೇವೆ ಎಂದು ಇಷ್ಟು ಭರವಸೆ ಕೊಡುತ್ತೇನೆ.

ಅಧ್ಯಕ್ಷರು :—ಸಭೆ ಇಂದು ಎದ್ದು ಮುತ್ತೆ ಸೋಮವಾರದಂದು ಮಧ್ಯಾಹ್ನ ಒಂದು ಗಂಟೆಗೆ ಸೇರುವುದು.

The House adjourned at Twenty-eight Minutes Past One of the Clock to meet again at One of the Clock, on Monday the 30th April, 1973.